**ದಿನಾಂಕ 18–7–2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ 5ನೇ ಪ್ರತಿವಾದಿ ಪರ ಶ್ರೀ ವೈ ಎಸ್ ಬಿ ವಕೀಲರಿಂದಃ**

ದಾವಾ ಅನುಸೂಚಿ ಆಸ್ತಿಗಳಲ್ಲಿ ಕ್ರಮ ಸಂಖ್ಯೆ 8 ರಿಂದ 12ನೇ ಆಸ್ತಿಗಳನ್ನು 5ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಸದರಿ ಆಸ್ತಿಗಳು ವಿಲ್ ನಾಮೆಯಂತೆ 1 ಮತ್ತು 2ನೇ ಪ್ರತಿವಾದಿಗಳು ಮತ್ತು ನನಗೆ ಬಂದಿರುತ್ತವೆ. ಸದರಿ ಆಸ್ತಿಗಳು ನನ್ನ ತಂದೆಗೆ ಅವರ ತಾಯಿಯಿಂದ ಬಂದಂತ ಆಸ್ತಿಗಳಾಗಿರುತ್ತವೆ. ನನ್ನ ತಂದೆಯವರು ಮಹರಾಷ್ಟ್ರ ರಾಜ್ಯದ ಪೊಲೀಸ್ ಕಮಿಷನರ್ ಆಗಿದ್ದರು. 1981 ರಲ್ಲಿ ನನ್ನ ತಂದೆಯವರು ವಿಲ್ಲು ನಾಮೆ ಮಾಡಿರುತ್ತಾರೆ. ವಿಲ್ ನಾಮೆ ಮಾಡುವ ಸಮಯ ನನ್ನ ತಂದೆಯವರ ಆರೋಗ್ಯ ಸ್ಥಿತಿ ಸುಸ್ಥಿತಿಯಲ್ಲಿತ್ತು. ನನ್ನ ತಂದೆಯವರು 1993 ರಲ್ಲಿ ಮೃತಪಟ್ಟಿರುತ್ತಾರೆ. 5ನೇ ಪ್ರತಿವಾದಿಗೆ ಮಾರಾಟ ಮಾಡಿದ ಸಮಯ ಕ್ರಮ ಸಂಖ್ಯೆ 8 ರಿಂದ 12 ನೇ ಆಸ್ತಿಗಳು ನಮ್ಮ ಸ್ವಾಧೀನದಲ್ಲಿದ್ದವು. ಮಾರಾಟದ ನಂತರ ಸದರಿ ಸ್ವತ್ತುಗಳ ಸ್ವಾಧೀನವನ್ನು 5ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತೇವೆ. ನಮ್ಮ ತಂದೆಯವರು ತೀರಿ ಹೋದ ವರ್ಷ 1993 ರಿಂದ 2012 ರವರೆಗೆ ಸದರಿ ವಿಲ್ ನಾಮೆಯ ಬಗ್ಗೆಯಾಗಲಿ ಅಥವಾ ಆಸ್ತಿಗಳ ಬಗ್ಗೆಯಾಗಲಿ ಯಾವುದೇ ತಕರಾರು ಇರಲಿಲ್ಲ. ಕ್ರಮ ಸಂಖ್ಯೆ 8 ರಿಂದ 12ನೇ ಆಸ್ತಿಗಳು ನಮ್ಮ ಪೂರ್ಣ ಜೊತೆ ಹಕ್ಕಿನ ಆಸ್ತಿಗಳು ಎಂದು ಅದಕ್ಕೆ ಬೇಕಾದ ಎಲ್ಲಾ ದಾಖಲೆಗಳನ್ನು ನೀಡಿ 5ನೇ ಪ್ರತಿವಾದಿಗೆ ಮಾರಾಟ ಮಾಡಿರುತ್ತೇವೆ. 5ನೇ ಪ್ರತಿವಾದಿ ಸದರಿ ಆಸ್ತಿಗಳನ್ನು ಖರೀಧಿಸಿದ ನಂತರ ಸದರಿ ಜಮೀನುಗಳಲ್ಲಿ ಸಾಕಷ್ಟು ಕೃಷಿ ಅಭಿವೃದ್ದಿ ಕೆಲಗಳನ್ನು ಮಾಡಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿ.

ವಾದಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ.ಗಳು ಬೆಳ್ತಂಗಡಿ

(ಸಾ.ಓ.ಹೇ.ಕೇ.ಸ.ಇ.ಎ.ಒ)